R.A. No. 10003/2023
**09.01.2023.**

**ಮಧ್ಯಂತರ ಅರ್ಜಿ 2 ರ ಮೇಲೆ ಆಂತರಿಕ ಆದೇಶ**

ಮೇಲ್ಮನವಿದಾರರ ಪರವಾಗಿ ದಿವಾನಿ ಪ್ರಕ್ರಿಯೇ ಸಂಹಿತೆ ಕ್ರಮಾದೇಶ 41 ನಿಯಮ 5 ರಡಿ ಸದರಿ ಅರ್ಜಿಯನ್ನು ಸಲ್ಲಿಸಿ, ದೊಡ್ಡಬಳ್ಳಾಪುರದ 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯವು ಓಎಸ್ ಸಂಖ್ಯೆ 346/2014 ರಲ್ಲಿ ದಿನಾಂಕಃ 19.11.2022 ರಂದು ನೀಡಿದ ಪ್ರಶ್ನಿತ ಆದೇಶಕ್ಕೆ ಸದರಿ ಮೇಲ್ಮನವಿಯ ನಿರ್ಣಯದವರೆಗೆ ತಡೆಯಾಜ್ಞೆ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

2. ಸದರಿ ಮೇಲ್ಮನವಿದಾರರು ತಮ್ಮ ಅರ್ಜಿಯ ಲಗತ್ತು ಪ್ರಮಾಣ ಪತ್ರದಲ್ಲಿ, ಸದರಿ ವಾದಿಯವರು ಪ್ರತಿವಾದಿಯ ವಿರುದ್ಧ ದಾವಾಸ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ಕ್ರಯಪತ್ರವನ್ನು ಬರೆದಕೊಂಡುವಂತೆ ಆದೇಶಿಸಬೇಕೆಂದು ಕೋರಿ ನಿರ್ದಿಷ್ಟ ಪರಿಹಾರಕ್ಕಾಗಿ ದಾವೆ ಸಲ್ಲಿಸಿದ್ದು ಸದರಿ ದಾವೆಯು ಡಿಕ್ರಿಯಾಗಿದ್ದು ಸದರಿ ಪ್ರಶ್ನಿತ ತೀರ್ಪು ಹಾಗೂ ಡಿಕ್ರಿಯನ್ನು ಪ್ರಶ್ನಿಸಿ ಸದರಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಮೇಲ್ಮನವಿಯಲ್ಲಿ ತನ್ನ ಪರವಾಗಿ ಆದೇಶವಾಗುವ ಸಾಧ್ಯತೆಯಿರುತ್ತದೆಂದು, ಅಲ್ಲದೇ ಸದರಿ ತೀರ್ಪು ಹಾಗೂ ಡಿಕ್ರಿಯ ಅದೇಶದ ಮೇರೆಗೆ ದಾವಾಸ್ತಿಯು ತನ್ನ ಸ್ವಾಧೀನಕ್ಕೆ ತೊಂದರೆಪಡಿಸುವ ಸಾಧ್ಯತೆಯಿರುತ್ತದೆಂದು, ಆದ್ದರಿಂದ ಸದರಿ ತೀರ್ಪು ಹಾಗೂ ಡಿಕ್ರಿಗೆ ತಡೆಯಾಜ್ಞೆ ನೀಡಬೇಕೆಂದು ಕೋರಿರುತ್ತಾರೆ.

3. ಮೇಲ್ಮನವಿದಾರರ ಪರವಾಗಿ ವಕೀಲರ ವಾದವನ್ನು ಆಲಿಸಲಾಯಿತು.

4. ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ದೊಡ್ಡಬಳ್ಳಾಪುರದ 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಾದಿಯರು / 1 ನೇ ಎದುರುದಾರರು ಪ್ರತಿವಾದಿಯ/2 ನೇ ಎದುರುದಾರರ ವಿರುದ್ಧ ದಾವಾಸ್ತಿಗೆ ಸಂಬಂಧಪಟ್ಟಂತೆ ನೋಂದಾಯಿತ ಕ್ರಯಪತ್ರವನ್ನು ಬರೆದಕೊಂಡುವಂತೆ ಆದೇಶಸಬೇಕೆಂದು ಕೋರಿ ನಿರ್ಧಿಷ್ಟ ಪರಿಹಾರಕ್ಕಾಗಿ ದಾವೆ ಸಲ್ಲಿಸಿದ್ದು ಸದರಿ ದಾವೆಯನ್ನು ಡಿಕ್ರಿಗೊಳಿಸಿದ್ದರಿಂದ ಬಾಧಿತ ಮೇಲ್ಮನವಿದಾರರು ಸದರಿ ಮೇಲ್ಮನವಿಯನ್ನು ಸಲ್ಲಿಸಿ ಮೇಲ್ಮನವಿಯ ಅಂತಿಮ ನಿರ್ಣಯದವರೆಗೆ ವಿಚಾರಣಾ ನ್ಯಾಯಾಲಯದ ಪ್ರಶ್ನಿತ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ಕೋರಿರುತ್ತಾರೆ.

6. ಸದರಿ ಪ್ರಶ್ನಿತ ತೀರ್ಪು ಹಾಗೂ ಡಿಕ್ರಿಯ ದಾವೆಗೆ ಮೇಲ್ಮನವಿದಾರರು ಪಕ್ಷಗಾರರಾಗಿರುವುದಿಲ್ಲ. ಆದರೆ 2 ನೇ ಎದುರುದಾರರು ತನಗೆ ದಿನಾಂಕಃ 22.12.2012 ರಂದು ನೋಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆಂದು ಪ್ರಶ್ನಿಸಿ ಸದರಿ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ತನ್ನ ಪರವಾಗಿ ಆದೇಶವಾಗುವ ಸಾಧ್ಯತೆಯಿರುತ್ತದೆಂದು, ಅಲ್ಲದೇ ಸದರಿ ತೀರ್ಪು ಹಾಗೂ ಡಿಕ್ರಿಯ ಅದೇಶದ ಮೇರೆಗೆ ದಾವಾಸ್ತಿಯ ತನ್ನ ಸ್ವಾಧೀನಕ್ಕೆ ತೊಂದರೆಪಡಿಸುವ ಸಾಧ್ಯತೆಯಿರುತ್ತದೆಂದು, ಆದ್ದರಿಂದ ಸದರಿ ತೀರ್ಪು ಹಾಗೂ ಡಿಕ್ರಿಗೆ ತಡೆಯಾಜ್ಞೆ ನೀಡಬೇಕೆಂದು ಕೋರಿರುತ್ತಾರೆ.

7. ಆದರೆ, ಸದರಿ 2 ನೇ ಎದುರುದಾರರು ತನ್ನ ಮಗಳಾದ ಮೇಲ್ಮನವಿದಾರರಿಗೆ ದಿನಾಂಕಃ 22.12.2012 ರಂದು ದಾವಾಸ್ತಿಗೆ ಸಂಬಂಧಪಟ್ಟಂತೆ ದಾನಪತ್ರವನ್ನು ಬರೆದುಕೊಡುವ ಪೂರ್ವದಲ್ಲಿಯೇ ದಿನಾಂಕಃ 20.11.2012 ರಂದು ವಾದಿ / 1 ನೇ ಎದುರುದಾರರಿಗೆ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆಂಬುದು ನ್ಯಾಯಾಲಯದ ಮುಂದಿರುವ ದಾಖಲೆಗಳ ಮೂಲಕ ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಅಂಶಗಳನ್ನು ಪರಿಗಣಿಸಿ ವಾದಿ ಸಲ್ಲಿಸಿದ್ದ ದಾವೆಯನ್ನು ಡಿಕ್ರಿಗೊಳಿಸಿರುವುದು ಕಂಡುಬರುತ್ತದೆ. ಆದ್ದರಿಂದ ಸದರಿ ವಿಚಾರಣಾ ನ್ಯಾಯಾಲಯದ ತೀರ್ಪು ಹಾಗೂ

ಡಿಕ್ರಿಗೆ ತಡೆಯಾಜ್ಞೆ ನೀಡಲು ಯಾವುದೇ ಸಮರ್ಥನೀಯವಾದ ಕಾರಣಗಳು ಇರುವುದಿಲ್ಲ. ಆದ್ದರಿಂದ ಸದರಿ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡಂತೆ –

**ಆದೇಶ**

ಮೇಲ್ಮನವಿಯ ಮತ್ತು ಮಧ್ಯಂತರ ಅರ್ಜಿ 2 ರ ನೋಟೀಸನ್ನು ಎದುರುದಾರರಿಗೆ ಕಳುಹಿಸಲು ಆದೇಶಿಸಲಾಗಿದೆ.

**ದಿನಾಂಕಃ 22.02.2023 ರಂದು ಕರೆಯುಲು ಆದೇಶಿಸಲಾಗಿದೆ.**

**(ರಮೇಶ ದುರುಗಪ್ಪ ಏಕಬೋಟೆ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ